# "ವಿಜ್ಞಾನ ಪಯಣ"

## ಸರಕಾರಿ ಪ್ರೌಢಶಾಲೆ, ಬ.ಸಾಲವಾಡಗಿ

ತಾ: ಮುದ್ದೇಬಿಹಾಳ 586214 ಜಿ: ವಿಜಯಪುರ



## ಅಧ್ಯಾಯ2 ಆಮ್ಲಗಳು, ಪ್ರತ್ಯಾಮ್ಲಗಳು ಮತ್ತು ಲವಣಗಳು

ಅ) ಈ ಕೆಳಗಿನ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಆಯ್ಕೆ ಮಾಡಿರಿ.

1) ಈ ಕೆಳಗಿನವುಗಳಲ್ಲಿ ನೈಸರ್ಗಿಕ ಸೂಚಕ ಎಂದರೇ,
ಅ) ಫಿನಾಪ್ತಲೀನ್ ಆ) ಅರಿಶಿಣ ಇ) ಮಿಥೈಲ್ ಆರೇಂಜ್ ಈ) ಮಿಥಲಿನ್ ನೀಲಿ

2) ಪ್ರತ್ಯಾಮ್ಲಗಳನ್ನು ಲಿಟ್ಮಸ್ ಪೇಪರ್ ನಿಂದ ಪರೀಕ್ಷಿಸಿದಾಗ ಅದರ ಬಣ್ಣದಲ್ಲಾಗುವ ಬದಲಾವಣೆ,
ಅ) ಕೆಂಪು–ನೀಲಿ ಆ) ನೀಲಿ–ಕೆಂಪು ಇ) ನೀಲಿ–ಹಸಿರು ಈ) ಹಳದಿ – ನೀಲಿ

3) ಕಾರ್ಬನ್ ಡೈ ಆಕ್ಸೈಡ್ ಅನ್ನು ಸುಣ್ಣದ ತಿಳಿನೀರಿನ ಮೂಲಕ ಹಾಯಿಸಿದಾಗ ಅದರ ಬಣ್ಣದಲ್ಲಾಗುವ ಬದಲಾವಣೆ,
ಅ) ಹಳದಿ ಆ) ಕಡು ಕೆಂಪು ಇ) ಹಾಲಿನಂತೆ ಬಿಳಿ ಈ) ಕಡು ಹಸಿರು

4) ಆಮ್ಲ ಮತ್ತು ಪ್ರತ್ಯಾಮ್ಲಗಳನ್ನು ನೀರಿನಲ್ಲಿ ವಿಲೀನಗೊಳಿಸಿದಾಗ ನಡೆಯುವ ಪ್ರಕ್ರಿಯೆ,
ಅ) ಅಂತರುಷ್ಣಕ ಆ) ಬಹಿರುಷ್ಣಕ ಇ) ತಟಸ್ಥ ಈ) ಯಾವುದೂ ಅಲ್ಲ

5) ಒಂದು ದ್ರಾವಣವು ಹೆಚ್ಚು $H^{+}$ ಅಯಾನುಗಳನ್ನು ಉತ್ಪತ್ತಿ ಮಾಡಿದರೆ ಅದು,
ಅ) ಪ್ರತ್ಯಾಮ್ಲ ಆ) ಆಮ್ಲ ಇ) ಕ್ಷಾರ ಈ) ತಟಸ್ಥ

6) ಒಬ್ಬ ವ್ಯಕ್ತಿಯು ಆಮ್ಲೀಯತೆಯಿಂದ ಬಳಲುತ್ತಿದ್ದಾಗ ಅವನಿಗೆ ಈ ಕೆಳಗಿನ ಯಾವ ವಸ್ತುಗಳನ್ನು ನೀಡುವಿರಿ?,
ಅ) ಲಿಂಬುರಸ ಆ) ನೆಲ್ಲಿಕಾಯಿ ಇ) ಮೆಗ್ನೇಷಿಯಂ ಹಾಲು ಈ) ಕಿತ್ತಳೆರಸ

7) ಒಬ್ಬ ವ್ಯಕ್ತಿಯಲ್ಲಿ ಹಲ್ಲಿನ ಸವೆತ ಉಂಟಾಗಿದೆ, ಹಾಗಾದರೆ ಆ ವ್ಯಕ್ತಿಯಲ್ಲಿ ಕಂಡು ಬರಬಹುದಾದ pH ಮಟ್ಟ,
ಅ) 7ಕ್ಕಿಂತ ಹೆಚ್ಚು ಆ) 9.2 ಇ) 5.5ಕ್ಕಿಂತ ಕಡಿಮೆ ಈ) 5.5ಕ್ಕಿಂತ ಹೆಚ್ಚು

8) ತುರಿಕೆ ಗಿಡದ ಎಲೆಗಳು ಚುಚ್ಚಿದಾಗ ಬಿಡುಗಡೆಯಾಗುವ ಆಮ್ಲ,
ಅ) ಅಸಿಟಿಕ್ ಆಮ್ಲ ಆ) ನೈಟ್ರಿಕ್ ಆಮ್ಲ ಇ) ಮೆಥನೋಯಿಕ್ ಆಮ್ಲ ಈ) ಗಂಧಕಾಮ್ಲ

9) ಮುರಿದ ಮೂಳೆಗಳಿಗೆ ಆಧಾರ ನೀಡಲು ಈ ಕೆಳಗಿನ ಸಂಯುಕ್ತವನ್ನು ಬಳಸುತ್ತಾರೆ.
ಅ) ಅಡುಗೆಸೋಡಾ ಆ) ವಾಷಿಂಗ್ ಸೋಡಾ ಇ) ಪ್ಲಾಸ್ಟರ್ ಆಫ್ ಪ್ಯಾರಿಸ್ ಈ) ಚೆಲುವೆಪುಡಿ

10) ಕುಡಿಯುವ ನೀರನ್ನು ಕ್ರಿಮಿಮುಕ್ತಗೊಳಿಸಲು ಈ ಕೆಳಗಿನ ಸಂಯುಕ್ತವನ್ನು ಬಳಸುತ್ತಾರೆ.
ಅ) ಅಡುಗೆಸೋಡಾ ಆ) ವಾಷಿಂಗ್ ಸೋಡಾ ಇ) ಪ್ಲಾಸ್ಟರ್ ಆಫ್ ಪ್ಯಾರಿಸ್ ಈ) ಚೆಲುವೆಪುಡಿ

*Shrinath Murankan* *Scince Teacher,* Visit : https:// shreenathmurankan.blogspot.com/

LIVEWORKSHEETS